**ಸಾಕ್ಷಿಗೆ ದಿನಾಂಕಃ 1.7.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ವಕೀಲರಿಂದಃಃ**

ಈ ಪ್ರಕರಣದಲ್ಲಿ ಆರೋಪಿತರು ನೀಡಿರುವ ಪ್ರತ್ಯುತ್ತರದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಬ್ಯಾಂಕ್ ಖಾತೆಯ ಮೂಲಕ ಆರೋಪಿತರಿಗೆ ಹಣ ನೀಡಲು ತೊಂದರೆ ಇರಲಿಲ್ಲ ಅಲ್ಲವೇ ಎಂದರೆ ಸಾಕ್ಷಿಯು ಆರೋಪಿತರು ನಗದು ರೂಪದಲ್ಲಿ ಹಣ ಬೇಕೆಂದು ಕೇಳಿದ್ದರಿಂದ ನಗದು ರೂಪದಲ್ಲಿ ಸಾಲ ನೀಡಿದೆ ಎಂದು ನುಡಿಯುತ್ತಾರೆ. ನಾನು ಆರೋಪಿತರಿಂದ 10 ಗ್ರಾಂ ನ ಚಿನ್ನದ ಓಲೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಆರೋಪಿತರಿಂದ ಕೆಎ-18-ಎನ್-7864 ವಾಹನವನ್ನು ಅಕ್ರಮವಾಗಿ ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸಾಕ್ಷಿಯು ನಾನು ಅದನ್ನು ಕಾನೂನು ಪ್ರಕಾರ ಖರೀದಿ ಮಾಡಿದ್ದೇನೆಂದು ನುಡಿಯುತ್ತಾರೆ. ಪ್ರಶ್ನಿತ ಚೆಕ್ಕನ್ನು ಆರೋಪಿತರು ಯಾವುದೇ ಸಾಲ ತೀರುವಳಿಗಾಗಿ ನನಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಕ್ರಮವಾಗಿ ಲಾಭ ಗಳಿಸುವ ಉದ್ದೇಶದಿಂದ ಆರೋಪಿತರ ವಿರುದ್ಧ ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಫಿರ್ಯಾದುದಾರರ ಪರ ವಕೀಲರಿಂದಃಃ**

ಆರೋಪಿತರು ಹೇಳಿದ್ದರಿಂದ ನಾನು ನಿಪಿ-1 ರಲ್ಲಿ ಮೊತ್ತ ಮತ್ತು ಹೆಸರನ್ನು ಆರೋಪಿತರ ಸಮಕ್ಷಮ ಭರ್ತಿ ಮಾಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲು ಆರೋಪಿ ಪರ ವಕೀಲರಿಂದಃಃ**

ನಾನು ಮರು ವಿಚಾರಣೆಯಲ್ಲಿ ಹೇಳಿರುವ ವಿಚಾರವನ್ನು ನೋಟೀಸಿನಲ್ಲಾಗಲೀ, ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲೀ, ಫಿರ್ಯಾದಿನಲ್ಲಾಗಲೀ ನಮೂದಿಸಿರುವುದಿಲ್ಲ ಎಂದರೆ ಸರಿ.

ಃಃ ಮರು ವಿಚಾರಣೆ ಇಲ್ಲಃಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಓ

Sd/-xx
ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ